**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–07)**

ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 33)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೂಮರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 42ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 33) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 42ನೇ ಪ್ರಕರಣದಲ್ಲಿ,-

(i) "ಯಾವುದೇ ನಿಷೇಧಿತ ವಸ್ತುವನ್ನು" ಎಂಬ ಪದಗಳ ತರುವಾಯ ", ಮೊಬೈಲ್ ಅಥವಾ ಯಾವುದೇ ಸಂಪರ್ಕ ಸಾಧನವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ಆರು ತಿಂಗಳುಗಳನ್ನು ಮೀರದ ಅವಧಿಗಾಗಿನ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ" ಎಂಬ ಪದಗಳ ಬದಲಾಗಿ "ಮೂರು ವರ್ಷಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 57ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 57ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಬಂಧಿಯು ಪೆರೋಲ್ ಮುಕ್ತಾಯಗೊಂಡ ಮೇಲೆ ಖುದ್ದಾಗಿ ಹಾಜರಾಗಲು ತಪ್ಪಿದರೆ, ಉದ್ಘೋಷಿತ ಅಪರಾಧಿ ಎಂಬುದಾಗಿ ಭಾವಿಸತಕ್ಕದ್ದು. ಅಲ್ಲದೇ, ಬಂಧಿಯು ಮತ್ತು ಆತನ ಜಾಮೀನುದಾರನು

ಬರೆದುಕೊಟ್ಟ ಬಂಧಪತ್ರವನ್ನು ರಾಜ್ಯವು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಹೊಣೆಗಾರರಾಗಿರತಕ್ಕದ್ದು ಹಾಗೂ ಮುಟ್ಟುಗೋಲು ಹಾಕಿಕೊಳ್ಳಲಾದ ಬಂಧಪತ್ರದ ಮೊತ್ತವನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು."

**4. 58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 58ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**58. ಖುದ್ದು ಹಾಜರಾಗಲು ತಪ್ಪಿದ್ದಕ್ಕಾಗಿ ದಂಡನೆ.-** 57ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಖುದ್ದಾಗಿ ಹಾಜರಾಗಲು ತಪ್ಪುವ ಯಾರೇ ಬಂದಿಯು ಅಪರಾಧ ನಿರ್ಣೀತನಾದ ಮೇಲೆ ಮೂರು ವರ್ಷಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. 57ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಖುದ್ದಾಗಿ ಹಾಜರಾಗಲು ತಪ್ಪಿದ ಬಂದಿಗೆ ಜಾಮೀನುದಾರನಾಗಿ ನಿಂತ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು."

**5. 58ಎ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 58ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**58ಎ. ಅಪರಾಧದ ಸಂಜ್ಞೇಯತೆ.-** (1) 42 ಮತ್ತು 58ನೇ ಪ್ರಕರಣದ ಅಡಿಯಲ್ಲಿನ ದಂಡನೀಯವಾದ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು;

(2) ಈ ಅಧಿನಿಯಮದ ಅಡಿಯಲ್ಲಿ ನೀಡಲಾದ ದಂಡನೆಯನ್ನು ಅಪರಾಧ ನಿರ್ಣೀತನಾದ ಯಾವುದೇ ಇತರ ಪ್ರಕರಣಗಳಲ್ಲಿ ನೀಡಿದ ಶಿಕ್ಷೆಗಳು/ದಂಡನೆಗಳ ಮೌನಸಮ್ಮತಿಯು (sufferance) ಪೂರ್ಣಗೊಂಡ ಮೇಲೆ ಜಾರಿಗೊಳಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಸಿಆರ್‌ಎಲ್. ಅಪೀಲು ಸಂ: 639/2015ರ ಮೂಲಕ ನೀಡಿರುವ ಆದೇಶದ ಮೇರೆ ಬಂದಿಗಳೊಂದಿಗಿನ ಸಂವಹನಕ್ಕಾಗಿ ಬಂದೀಖಾನೆ ಪರಿಮಿತಿಯ ಒಳಗೆ ಮತ್ತು ಹೊರಗೆ ಉತ್ತಮ ವಾತಾವರಣವನ್ನು ನಿರ್ಮಿಸುವ ಸಲುವಾಗಿ ಹಾಗೂ ಪೆರೋಲ್ ಉಲ್ಲಂಘನೆ ಮತ್ತು ಯಾವುದೇ ನಿಷೇಧಿತ ವಸ್ತುಗಳನ್ನು ಬಂದೀಖಾನೆಯೊಳಗೆ ತರುವುದು ಅಥವಾ ಹೊರಗೆ ತೆಗೆದುಕೊಂಡು ಹೋಗುವ ಅಪಾಯವನ್ನು ನಿವಾರಿಸಲು ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ನ್ನು (1963ರ ಕರ್ನಾಟಕ ಅಧಿನಿಯಮ 33) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

# **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರಗ ಜ್ಞಾನೇಂದ್ರ**
ಗೃಹ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 33)

## ಉದ್ಧೃತ ಭಾಗ

**Xx Xx Xx**

**42. ಬಂದೀಖಾನೆಗಳೊಳಕ್ಕೆ ನಿಷೇಧಿತ ವಸ್ತುಗಳನ್ನು ತರುವುದಕ್ಕಾಗಿ ಅಥವಾ ಅವುಗಳಿಂದ ಅವುಗಳನ್ನು ಸ್ಥಳಾಂತರಿಸುವುದಕ್ಕಾಗಿ ದಂಡನೆ ಮತ್ತು ಬಂದಿಗಳೊಡನೆ ಸಂಪರ್ಕ.-** ಯಾರೇ ಆಗಲಿ ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮಕ್ಕೆ ತದ್ವಿರುದ್ಧವಾಗಿ ಯಾವುದೇ ಬಂದೀಖಾನೆಯೊಳಕ್ಕೆ ಯಾವುದೇ ನಿಷೇಧಿತ ವಸ್ತುವನ್ನು ತಂದರೆ ಅಥವಾ ಅದರಿಂದ ಅದನ್ನು ಸ್ಥಳಾಂತರಿಸಿದರೆ ಅಥವಾ ಯಾವುದೇ ಆದ ಸಾಧನದ ಮೂಲಕ ಅದನ್ನು ತರಲು ಅಥವಾ ಸ್ಥಳಾಂತರಿಸಲು ಪ್ರಯತ್ನಿಸಿದರೆ ಅಥವಾ ಬಂದೀಖಾನೆಯ ಪರಿಮಿತಿಗಳ ಹೊರಗಡೆ ಯಾವನೇ ಬಂದಿಗೆ ಅದನ್ನು ಸರಬರಾಜು ಮಾಡಿದರೆ ಅಥವಾ ಸರಬರಾಜು ಮಾಡಲು ಪ್ರಯತ್ನಿಸಿದರೆ ಅವನು ಮತ್ತು ಯಾವುದೇ ಅಂಥ ನಿಯಮಕ್ಕೆ ತದ್ವಿರುದ್ಧವಾಗಿ ತಿಳಿದೂ ತಿಳಿದೂ ಯಾವುದೇ ಬಂದೀಖಾನೆಯೊಳಕ್ಕೆ ಯಾವುವೇ ಅಂಥ ವಸ್ತುಗಳನ್ನು ತರಲು ಅಥವಾ ಅಲ್ಲಿಂದ ಅವುಗಳನ್ನು ಸ್ಥಳಾಂತರಿಸಲು, ಯಾವನೇ ಬಂದಿಯು ಅವುಗಳನ್ನು ಹೊಂದಿರಲು ಅಥವಾ ಬಂದೀಖಾನೆಯ ಪರಿಮಿತಿಗಳ ಹೊರಗಡೆ ಯಾವನೇ ಬಂದಿಗೆ ಸರಬರಾಜು ಮಾಡುವುದಕ್ಕೆ ಅವಕಾಶ ಮಾಡಿಕೊಡುವ ಪ್ರತಿಯೊಬ್ಬ ಅಧಿಕಾರಿಯು, ಮತ್ತು ಯಾವುವೇ ಅಂಥ ನಿಯಮಗಳಿಗೆ ತದ್ವಿರುದ್ಧವಾಗಿ ಯಾವನೇ ಬಂದಿಯೊಡನೆ ಸಂಪರ್ಕಿಸುವ ಅಥವಾ ಸಂಪರ್ಕಿಸಲು ಪ್ರಯತ್ನಿಸುವ ಯಾರೇ ಆಗಲಿ, ಮತ್ತು ಈ ಪ್ರಕರಣದ ಮೂಲಕ ದಂಡನೀಯವಾದ ಯಾವುದೇ ಅಪರಾಧವನ್ನು ದುಷ್ಪ್ರೇರಣೆ ಮಾಡುವ ಯಾರೇ ಆಗಲಿ ಅಪರಾಧವು ನಿರ್ಣಯವಾದ ಮೇಲೆ, ಆರು ತಿಂಗಳುಗಳನ್ನು ಮೀರದ ಅವಧಿಗಾಗಿನ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತರಾಗತಕ್ಕದ್ದು.

XX XX XX

**57. ಅವಧಿಯು ಮುಕ್ತಾಯವಾದ ತರುವಾಯ ಬಂದಿಯು ಖುದ್ದಾಗಿ ಹಾಜರಾಗತಕ್ಕದ್ದು**

**ಇಲ್ಲದಿದ್ದರೆ ಅವನು ದಸ್ತಗಿರಿ ಆಗಲು ಗುರಿಯಾಗುತ್ತಾನೆ.-** (1) 55ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಬಂದಿಯನ್ನು ತಾತ್ಕಾಲಿಕವಾಗಿ ಅಥವಾ ೫೬ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪೆರೋಲಿನ ಮೇಲೆ ಬಿಡುಗಡೆ ಮಾಡಲಾಗಿದ್ದಂಥ ಅವಧಿಯು ಮುಕ್ತಾಯವಾದ ತರುವಾಯ, ಅವನು ಯಾವ ಬಂದೀಖಾನೆಯಿಂದ ಅವನನ್ನು ಬಿಡುಗಡೆ ಮಾಡಲಾಗಿದ್ದಿತೋ ಆ ಬಂದೀಖಾನೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗತಕ್ಕದ್ದು.

(2) (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಬಂದಿಯು ಖುದ್ದಾಗಿ ಹಾಜರಾಗಲು ತಪ್ಪಿದರೆ, ಅವನನ್ನು ಯಾವನೇ ಪೊಲೀಸು ಅಧಿಕಾರಿಯು ವಾರೆಂಟು ಇಲ್ಲದೆ ದಸ್ತಗಿರಿ ಮಾಡಬಹುದು ಮತ್ತು ಅವನನ್ನು ನ್ಯಾಯಿಕ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಬಹುದು, ಅವನು ಶಿಕ್ಷೆಯ ಮುಕ್ತಾಯವಾಗಿಲ್ಲದ ಭಾಗವನ್ನು ಅನುಭವಿಸಲು ಅವನನ್ನು ಸೆರೆಗೆ ವಾಪಸ್ಸು ಕಳುಹಿಸತಕ್ಕದ್ದು.

**XX XX XX**

**58. ಹಾಜರಾಗಲು ತಪ್ಪಿದ್ದಕ್ಕಾಗಿ ದಂಡನೆ.-** 58ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಖುದ್ದಾಗಿ ಹಾಜರಾಗಲು ತಪ್ಪುವ ಯಾವನೇ ಬಂದಿಯು ಅಪರಾಧವು ನಿರ್ಣಯವಾದ ಮೇಲೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗಾಗಿ ಯಾವುದೇ ವಿವರಣೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**XX XX XX**

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**TWELFTH SESSION**

# THE KARNATAKA PRISONS (AMENDMENT) BILL, 2022

**(LA Bill No. 07 of 2022)**

A Bill further to amend the Karnataka Prisons Act, 1963.

Whereas it is expedient further to amend the Karnataka Prisons Act, 1963 (Karnataka Act 33 of 1963), for the purpose hereinafter appearing:

Be it enacted by the Karnataka State Legislature in the Seventy Third year of the Republic of India as follows:-

**1. Short title and commencement.-** (1) This Act may be called the Karnataka Prisons (Amendment) Act, 2022.

(2) It shall come into force at once.

**2. Amendment of section 42.-** In section 42 of the Karnataka Prisons Act, 1963 (Karnataka Act 33 of 1963) (here in after referred to as the Principal Act),-

(i) after the words “any prohibited article”, the words “mobile or any instrument of communication” shall be inserted.

(ii) for the words "not exceeding six months, or with fine not exceeding two hundred rupees, or with both" the words "not less than three years but which may extend to five years and fine" shall be substituted.

**3. Amendment of section 57.-** In section 57 of the Principal Act, after sub-section (1) the following shall be inserted, namely:-

“Provided that, notwithstanding anything contained in any other law for time being in force, if the prisoner who fails to surrender on expiration of the parole, shall be deemed to be a proclaimed offender. Further, the bonds executed by the prisoner and the surety of him, shall be liable to be forfeited to the state and forfeited bond amount shall be recovered as arrears of land revenue”.

**4. Amendment of section 58.-** For section 58 of the Principal Act, the following shall be substituted, namely:-

“**58. Penalty for failure to surrender.-** Any prisoner who fails to surrender himself as required by sub-section (1) of section 57 shall on conviction, be punished with imprisonment for a term of not less than three years but which may extend to five years and with fine. The person who stood surety to the prisoner, who failed to surrender himself, as required by sub section (1) of section 57 shall on conviction, be punished with imprisonment for a term of not less than six months but which may extend to one year and with fine.”

**5. Insertion of Section 58A.-** After section 58 of the Principal Act, the following shall be inserted, namely:-

“**58A. Offences to be Cognizable**.- (1)The Offences punishable under section 42 and 58 shall be cognizable.

(2) The punishment awarded under this Act shall operate on completion of the sufferance of the sentences or punishment awarded in any other cases in which is convicted”.

## STATEMENT OF OBJECTS AND REASONS

It is considered necessary to amend the Karnataka Prisons Act, 1963 (Karnataka Act 33 of 1963) to curb the menace of jumping parole and introducing or removal of any prohibited articles, into or from prison and communication with prisoners which is required to create good atmosphere within and outside the limits of a prison on the direction given by the Hon'ble High Court of Karnataka in CRL. Appeal No.639/2015.

Hence the Bill.

## FINANCIAL MEMORANDUM

There is no extra expenditure involved the proposed legislative measure.

**AARAGA JNANENDRA**
Minister for Home

**M.K. VISHALAKSHI**
Secretary (I/c)
Karnataka Legislative Assembly

## ANNEXURE

## Extract from the Karnataka Prison Act, 1963

## (Karnataka Act 33 of 1963)

**XX XX XX**

**42. Penalty for introduction or removal of prohibited articles, into or from prisons and communication with prisoners.—** Whoever, contrary to any rule under this Act, introduces or removes or attempts by any means whatever, to introduce or remove, into or from any prison, or supplies or attempts to supply to any prisoner outside the limits of a prison, any prohibited article, and every officer of a prison who, contrary to any such rule knowingly suffers any such article to be introduced into or removed from any prison, to be possessed by any prisoner or to be supplied to any prisoner outside the limits of a prison, and whoever, contrary to any such rule, communicates or attempts to communicate with any prisoner, and whoever abets any offence made punishable by this section, shall, on conviction, be punished with imprisonment for a term not exceeding six months, or with fine not exceeding two hundred rupees, or with both.

**XX XX XX**

**57. Prisoner to surrender himself on the expiration of the period otherwise liable to be arrested.—**(1) On the expiry of the period for which a prisoner was released temporarily under sub-section (1) of section 55, or on parole under subsection (1) of section 56, he shall surrender himself to the officer in charge of the prison from which he was released.

(2) If a prisoner fails to surrender himself as required by sub-section (1), he may be arrested by any Police Officer without a warrant and produced before a Judicial Magistrate who shall remand him to undergo the unexpired portion of the sentence.

**XX XX XX**

**58. Penalty for failure to surrender.—**Any prisoner who fails to surrender himself, as required by sub-section (1) of section 57, shall, on conviction, be punished with imprisonment of either description for a term which may extend to two years or with fine, or with both.

**XX XX XX**

Govt. Press, Vikasa Soudha, Bengaluru, 15th March, 2022, P7, W.D. , Copies 500